ದಿಃ 18.12.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ 9 ರವರ ಪರ ಶ್ರೀ ಎ ಎಸ್ ಎಸ್ ವಕೀಲರಿಂದ ಃ**

ನಿಪಿ 43 ರಿಂದ ನಿಪಿ 46 ನಮ್ಮ ಜಮೀನಿಗೆ ಸಂಬಂದಪಟ್ಟ ದಾಖಲಾತಿಗಳಾಗಿರುತ್ತವೆ. ಸದರಿ ದಾಖಲಾತಿಗಳು ಜಮೀನಿಗೆ ಸಂಬಂದಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 9 ರವರು ನ್ಯಾಯಾಲಯಕ್ಕೆ ನೀಡಿರುವ ದಾಖಲಾತಿಗಳ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. 9 ನೆ ಪ್ರತಿವಾದಿಯನ್ನು ಯಾವ ಕಾರಣಕ್ಕೆ ಪಕ್ಷಗಾರರನ್ನಾಗಿ ಮಾಡಿರುತ್ತೀರಾ ಎಂದರೆ ಸಾಕ್ಷಿ ಬೋಗ್ಯ ಅಡಮಾನಕ್ಕೆ ಇಟ್ಟಿರುವ ಕಾರಣ ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ನನ್ನ ದೊಡ್ಡಪ್ಪ ಅಡಮಾನಕ್ಕೆ ಇಟ್ಟಿರುತ್ತಾರೆ. ಸದರಿ ಅಸ್ತಿಯನ್ನು ಬಿಡುಗಡೆ ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಬಿಡುಗಡೆಯಾಗಿರುವ ಬಗ್ಗೆ ನಾನು ದಾಖಲಾತಿಗಳನ್ನು ಪರಿಶೀಲನೆ ಮಾಡಿ ತಿಳಿದುಕೊಂಡಿರುವುದಿಲ್ಲ.

ಖಾನೇಷಮಾರಿ ನಂಬರ್ 321 ಮತ್ತು 322 ರ ಸಂಬಂದ ನಾವು ಸಿ ಷೆಡ್ಯೂಲ್ ಸ್ವತ್ತುಗಳ ಮೇಲೆ ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿ. 517 ರಿಂದ 519 ರ ಖಾನೇಷಮಾರಿ ನಂಬರ್ ನ್ನು ಪ್ರತಿವಾದಿ 9 ರವರು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿ ಡಿ 25 ರಲ್ಲಿ ಇರುವ ಚೆಕ್ ಬಂದಿಯ ಮೇಲೆ ನಾನು ದಾವೆಯನ್ನು ಹೂಡಿರುವುದಿಲ್ಲ ಎಂದರೆ ಸರಿ. ಪ್ರತಿವಾದಿ 9 ರವರ ಆಸ್ತಿಗೂ ದಾವಾ ಸ್ವತ್ತುಗಳಿಗೂ ಸಂಬಂದ ಇರುವುದಿಲ್ಲ ಎಂದರ ಸಾಕ್ಷಿ ಎಲ್ಲ ಒಂದೇ ಖಾನೇಷುಮಾರಿ ನಂಬರ್ ಆಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ದಾವೆಯಲ್ಲಿ ಖಾನೇಷುಮಾರಿ ನಂಬರ್ ಗಳು ಒಂದೇ ಇರುತ್ತವೆ ಎಂದು ಬರೆಯಿಸಿ ಹಾಕಿರುವುದಿಲ್ಲ ಎಂದರೆ ಸಾಕ್ಷಿ ನಮ್ಮ ವಕೀಲರಿಗೆ ಅದು ಗೊತ್ತಿರುತ್ತದೆ ಎಂದು ನುಡಿಯುತ್ತಾರೆ.

ನಾನು ಪ್ರತಿವಾದಿ 9 ರವರ ಹತ್ತಿರ ಆಸ್ತಿಯನ್ನು ಬಿಡಿಸಿಕೊಡಿ ಎಂದು ದಾವೆಯನ್ನು ಹೂಡಿರುವುದಿಲ್ಲ ಎಂದರೆ ಸರಿಯಲ್ಲ , ನಾವು ಬಿಡಿಸಿಕೊಡಿ ಎಂದು ದಾವೆಯನ್ನು ಹೂಡಿರುತ್ತೇವೆ. ನಾನು ಬಿಡಿಸಿಕೊಡಿ ಎಂದು ದಾವೆಯನ್ನು ಹೂಡಿರುವುದಿಲ್ಲ ಎಂದರೆ ಸರಿಯಲ್ಲ. ನಿ ಪಿ 46 ಕ್ಕೂ ಮತ್ತು ಸಿ ಷೆಡ್ಯೂಲ್ ಸ್ವತ್ತಿಗೂ ಸಂಬಂಧ ಇರುವುದಿಲ್ಲ ಎಂದರೆ ಗೊತ್ತಿಲ್ಲ. ಸಿ ಷೆಡ್ಯೂಲ್ ಸ್ವತ್ತಿಗೂ

ನಾನು ಹಾಜರುಪಡಿಸಿರುವ ದಾಖಲಾತಿಗಳಿಗೂ ಸಂಬಂದ ಇಲ್ಲದೇ ಇದ್ದರೂ ಪ್ರತಿವಾದಿ ೧ ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ದಾಖಲಾತಿಗಳನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಬೋಗ್ಯ ಪತ್ರವನ್ನು ರಿಲೀಸ್ ಡಿಡ್ ಮತ್ತು ಕ್ರಯಪತ್ರವನ್ನು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಿ ಷೆಡ್ಯೂಲ್ ಸ್ವತ್ತಿಗೂ ಮತ್ತು ನನಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**